2) ಸಾಂಸ್ಕೃತಿಕ ಭವನ– ಮಂಜುನಾಥ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ, ಯುಗದ ಕೋಟೆ.

3) ಸಾಂಸ್ಕೃತಿಕ ಭವನ– ಸ್ವಜೀವನ್ ಸರ್ವಿಸ್ ಸೆಂಟರ್ ಟಿ. ಗೊಲ್ಲಹಳ್ಳಿ, ಚಿಂತಾಮಣಿ ತಾ॥.

ಆ) ಹಂತಹಂತವಾಗಿ ಅನುದಾನ ಲಭ್ಯತೆಯ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

ಇ) 'ಆ' ರಂತೆ ಕ್ರಮ ವಹಿಸಲಾಗುವುದು.

ಈ) ಅನುದಾನದ ಲಭ್ಯತೆ ಮೇಲೆ ಕ್ರಮವಹಿಸಲಾಗುವುದು.

ವೈದ್ಯರ ಕರ್ತವ್ಯದ ವಿವರ

5132 (5688); ಶ್ರೀ ಕೃಷ್ಣಪ್ಪ ಎಂ (ವಿಜಯನಗರ)

ಅ) ರಾಜ್ಯದ ಜಿಲ್ಲೆಗಳ ಜಿಲ್ಲಾ ಆಸ್ಪತ್ರೆಗಳಲ್ಲಿರುವ ವೈದ್ಯರುಗಳ ಸಂಖ್ಯೆ ಎಷ್ಟು; ನಿಯಮಾನುಸಾರ ಇರಬೇಕಾದ ವೈದ್ಯರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಜಿಲ್ಲಾ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆಗಾಗಿ ರಾತ್ರಿ ಪಾಳಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ವೈದ್ಯರ ಸಂಖ್ಯೆ ಎಷ್ಟು; (ಆಸ್ಪತ್ರೆವಾರು ವಿವರ ನೀಡುವುದು)

ಇ) ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ವೆಂಟಲೇಟರ್ ಡಯಾಲಿಸೀಸ್ ಮುಂತಾದ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿದೆಯೇ; ಸೌಲಭ್ಯಗಳಿಲ್ಲದ ಆಸ್ಪತ್ರೆಗಳಿಗೆ ಕೂಡಲೆ ಸೌಲಭ್ಯ ದೊರಕಿಸಲಾಗುತ್ತದೆಯೇ; (ವಿವರ ನೀಡುವುದು)

ಶ್ರೀ ಯು.ಟಿ. ಖಾದರ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದ ಜಿಲ್ಲೆಗಳಲ್ಲಿ 455 ವೈದ್ಯರುಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ನಿಯಮಾನುಸಾರ 691 ವೈದ್ಯರು ಕರ್ತವ್ಯ ನಿರ್ವಹಿಸಬೇಕಾಗಿರುತ್ತದೆ. ಜಿಲ್ಲಾವಾರು ವಿವರ ಅನುಬಂಧ–1 ರಲ್ಲಿ ನೀಡಲಾಗಿದೆ.

ಆ) ಜಿಲ್ಲಾ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆಗಾಗಿ ಸರದಿಯ ಮೇಲೆ ವೈದ್ಯರುಗಳು ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

ಇ) ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೌಲಭ್ಯಗಳನ್ನು ಒದಗಿಸಲಾಗಿದೆ.

ರಾಮನಗರ ಮತ್ತು ಯಾದಗಿರಿ ಜಿಲ್ಲಾ ಆಸ್ಪತ್ರೆಗಳನ್ನು ಹೊರತು ಪಡಿಸಿ ಉಳಿದ ಜಿಲ್ಲಾ ಆಸ್ಪತ್ರೆಗಳಲ್ಲಿ ವೆಂಟಿಲೇಟರ್ ಸೌಲಭ್ಯ ಒದಗಿಸಲಾಗಿದೆ.

ರಾಮನಗರ ಮತ್ತು ಯಾದಗಿರಿ ಜಿಲ್ಲಾ ಆಸ್ಪತ್ರೆಗಳಿಗೆ ಸರ್ಕಾರದ ಆದೇಶ ದಿನಾಂಕ: 16–11–2015ರಲ್ಲಿ ವೆಂಟಿಲೇಟರ್ ಆಳವಡಿಸಲು ಮಂಜೂರಾತಿ ನೀಡಿದೆ. ಅದರಂತೆ ಒದಗಿಸಲು ಕ್ರಮವಹಿಸಲಾಗಿದೆ.

ಅನುಬಂಧ–1 ಪ್ರಶ್ನೆ ಸಂಖ್ಯೆ: 5688				
ಕ್ರ ಸಂ	ಜಿಲ್ಲೆ ಹೆಸರು	ಜಿಲ್ಲಾ ಆಸ್ಪತ್ರೆ		
		ಮ	ಕ	ಖಾ
1	ಬೆಂಗಳೂರು ನಗರ (ಪ್ರಮುಖ ಆಸ್ಪತ್ರೆಗಳು)	122	99	23
2	ರಾಮನಗರ	15	12	3
3	ಚಿತ್ರದುರ್ಗ	34	22	12
4	ಚಿಕ್ಕಬಳ್ಳಾಪುರ	16	11	5
5	ತುಮಕೂರು	34	27	7
6	ದಾವಣಗೆರೆ	41	28	13
7	ಕೋಲಾರ	27	24	3
8	ಚಾಮರಾಜನಗರ	22	18	4
9	ಕೊಡಗು	28	15	13
10	ಮಂಗಳೂರು (ದ.ಕ)	33	19	14
11	ಚಿಕ್ಕಮಗಳೂರು	25	17	8
12	ಉಡುಪಿ	21	16	5
13	ಬಾಗಲಕೋಟೆ	28	15	13
14	ಗದಗ	12	7	5
15	ಧಾರವಾಡ	21	15	6
16	ಹಾವೇರಿ	39	23	16
17	ಕಾರವಾರ	25	15	10
18	ವಿಜಯಪುರ	26	16	10
19	ಕೊಪ್ಪಳ	11	8	3
20	ಕಲ್ಬುರ್ಗಿ	77	34	43
21	ಬಳ್ಳಾರಿ	21	11	10
22	ಯಾದಗಿರಿ	13	3	10
ಒಟ್ಟು		691	455	236